5 ನೇ ಆರೋಪಿ ಮೂಲ ಪ್ರಕರಣವಾದ SC 55/2016 ರಲ್ಲಿ ಸತತವಾಗಿ ಗೈರು ಹಾಜರಾದ ಕಾರಣ, ಮೂಲ ಪ್ರಕರಣವನ್ನು ವಿಂಗಡಿಸಿ 5 ನೇ ಆರೋಪಿಯ ವಿರುದ್ದ SC 188/2018 ರಲ್ಲಿ ಪ್ರತ್ಯೇಕ ಪ್ರಕರಣವನ್ನು ದಾಖಲಿಸಿದ್ದು, ನಂತರ 5 ನೇ ಆರೋಪಿತನನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಮೂಲ ಪ್ರಕರಣದಲ್ಲಿ ಸಾಕ್ಷ್ಯವನ್ನು ಮುಂದುವರಿಸಲು ತಿರ್ಮಾನಿಸಿ ನ್ಯಾಯಾಲಯವೂ ದಿನಾಂಕ 22.08.2024 ರಂದು ಆದೇಶಿಸಿದ್ದು, ಆ ಪ್ರಕಾರವಾಗಿ ಸಾಕ್ಷಿಯ ಮುಂದುವರಿದ ಮುಖ್ಯವಿಚಾರಣೆಯನ್ನು ಮತ್ತು ಮುಂದುವರೆದ ಪಾಟೀಸವಾಲನ್ನು ಪಡೆದುಕೊಳ್ಳಲಾಯಿತು.

**ಸಾಕ್ಷಿಯನ್ನು ದಿನಾಂಕ 24.10.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯವಿಚಾರಣೆಃ **ಸರಕಾರಿ ಅಭಿಯೋಜಕರಿಂದ.**

59. 5 ನೇ ಆರೋಪಿ ಘಟನೆಯ ಕಾಲಕ್ಕೆ 5 ನೇ ಸೆಲ್‌ನಲ್ಲಿ ಮಾಡೂರು ಯುಸೂಫನ ಜೊತೆ ಇದ್ದ. ಮಾಡೂರು ಯುಸೂಫನ ಮೇಲೆ ಹಲ್ಲೆಯಾಗುವ ವೇಳೆಗೆ 5 ನೇ ಆರೋಪಿಗೂ ಸ್ವಲ್ಪ ಗಾಯಗಳು ಆಗಿದ್ದವು. ಗಾಯಾಳು ಮಾಡೂರು ಯುಸೂಫನನ್ನು ಕಾರಾಗೃಹದಿಂದ ಆಸ್ಪತ್ರೆಗೆ ಕಳುಹಿಸಿ ಮತ್ತೇ ಸೆಲ್ ಬಳಿ ಬಂದಾಗ 5 ನೇ ಆರೋಪಿ ಸಹ ಗಣೇಶ ಶೆಟ್ಟಿಯನ್ನು ಇರಿಸಲಾಗಿದ್ದ ಸೆಲ್‌ನಿಂದ ಉಳಿದ ಆರೋಪಿಗಳ ಜೊತೆ ಹೊರಗೆ ಬರುತ್ತಿದ್ದ. 5 ನೇ ಆರೋಪಿಯ ಕೈಯಲ್ಲಿ ರೀಪು ಇತ್ತು. 5 ನೇ ಆರೋಪಿಗೆ ಗಾಯವಾಗಿತ್ತು ಮತ್ತು ಆತನ ಬಟ್ಟೆಗೆ ರಕ್ತವಾಗಿತ್ತು. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ 5 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.**

60. ನಾನು ಮಂಗಳೂರು ಜಿಲ್ಲಾ ಕಾರಾಗೃಹದ ಅಧೀಕ್ಷಕನಾಗಿ Prison Manual ಅಡಿಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಸಾಕ್ಷಿಗೆ ನೀವು ಕಾರಾಗೃಹದ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುವ ವೇಳೆಗೆ Half Margin Full Scap Register ನ್ನು ನಿರ್ವಹಣೆ ಮಾಡಬೇಕು ಮತ್ತು ಕಾರಾಗೃಹದ ದೈನಂದಿನ ಚಟುವಟಿಕೆಗಳ ಬಗ್ಗೆ ಸದರಿ ದಾಖಲೆಯಲ್ಲಿ ನಮೂದಿಸಿ ಪ್ರತೀ

ತಿಂಗಳು 5 ನೇ ತಾರಿಖಿನ ಒಳಗಾಗಿ ಅದನ್ನು ರಾಜ್ಯ ಕಾರಾಗೃಹಗಳ ಐ.ಜಿ.ಪಿ ರವರ ಪರಿಶೀಲನೆಗೆ ಹಾಜರುಪಡಿಸಬೇಕು ಎಂದು ಪ್ರಶ್ನಿಸಲಾಗಿ, ಸಾಕ್ಷಿ ಈಗ ಸದರಿ ನಿಯಮಾವಳಿ ಮಾರ್ಪಾಡಾಗಿದ್ದು, ನಾವು ಆ ದಿನದ ವರದಿಯನ್ನು ಅದೇ ದಿನ ಐ.ಜಿ.ಪಿ ರವರ ಅವಗಾಹನೆಗೆ ತರಬೇಕಾಗುತ್ತದೆ ಎಂದು ನುಡಿಯುತ್ತಾರೆ. ಕೈಬರಹದಲ್ಲಿ ಬರೆದು ವರದಿಯನ್ನು ನೀಡುವ ಕ್ರಮ ಇರುವುದಿಲ್ಲ ಆದರೆ ಕಾರಾಗೃಹದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಅದೇ ದಿನ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು ಕಡ್ಡಾಯ ಎಂದು ಸಾಕ್ಷಿ ನುಡಿಯುತ್ತಾರೆ.

61. ಕರ್ನಾಟಕ ಕಾರಾಗೃಹ ನಿಯಮಾವಳಿಯ ನಿಯಮ 26 ರಲ್ಲಿ ಕೈಬರಹದಲ್ಲಿ ಬರೆಯುವ ವಹಿಯನ್ನು ನಿರ್ವಹಣೆ ಮಾಡಬೇಕು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ ಮತ್ತು ನಾನು ಸದರಿ ನಿಯಮಾವಳಿಯ ಅಡಿಯಲ್ಲಿ ವಹಿಯನ್ನು ನಿರ್ವಹಣೆ ಮಾಡುತ್ತಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ಸಂಪೂರ್ಣ ವಿಚಾರವನ್ನು ರಿಜಿಸ್ಟರ್ ನಲ್ಲಿ ನಮೂದಿಸಿಲ್ಲ ಆದರೆ ಘಟನೆಯ ಬಗ್ಗೆ ಸಂಕ್ಷಿಪ್ತವಾಗಿ ನಮೂದಿಸಿ ಕಾರಾಗೃಹ ಐ.ಜಿ.ಪಿ ರವರಿಗೆ ವರದಿ ಸಲ್ಲಿಸಿರುತ್ತೇನೆ. ನನ್ನಿಂದ ಪ್ರಕರಣದ ತನಿಖಾಧಿಕಾರಿಗಳು ಘಟನೆಯ ಬಗ್ಗೆ ನಾನು ಐ.ಜಿ.ಪಿ ರವರಿಗೆ ಸಲ್ಲಿಸಿದ ಸಂಕ್ಷಿಪ್ತ ವರದಿಯ ಪ್ರತಿಯನ್ನು ಪಡೆದುಕೊಂಡಿಲ್ಲ.

62. ಕಾರಾಗೃಹದ ನಿಯಮಾವಳಿಗಳಂತೆ ವಾರದ ಪ್ರತೀ ಸೋಮವಾರ ಖೈದಿಗಳನ್ನು ಮುಖತಃ ಮಾತನಾಡಿಸಿ ಅವರ ಸಮಸ್ಯೆಗಳನ್ನು ಆಲಿಸಲಾಗುತ್ತದೆ. ಸಾಕ್ಷಿಗೆ ಖೈದಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಾಗ ಅದನ್ನು ದಾಖಲಿಸಬೇಕಾಗುತ್ತದೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ

ಆರೋಪಿಗಳು ತಮ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗುವ ಬಗ್ಗೆ ಅಥವಾ ವಕೀಲರನ್ನು ನೇಮಿಸಿಕೊಳ್ಳುವ ಬಗ್ಗೆ ಕೇಳಿಕೊಂಡಾಗ ಅವುಗಳನ್ನು ಬಗೆಹರಿಸಲಾಗುತ್ತದೆ ಆದರೆ ದಾಖಲಾತಿ ಮಾಡುವುದಿಲ್ಲ, ಸಾಕ್ಷಿ ಮುಂದುವರೆದು ಬೇರೆ ಕಾರಾಗೃಹಗಳಿಗೆ ವರ್ಗಾವಣೆ ಕೋರಿದ ಸಂದರ್ಬದಲ್ಲಿ ಖೈದಿಗಳಿಂದ ಕಾರಣ ತಿಳಿದು, ಅದನ್ನು ದಾಖಲಿಸಿ ಮೇಲಾಧಿಕಾರಿಗಳಿಗೆ ತಿಳಿಸಲಾಗುತ್ತದೆ ಎಂದು ನುಡಿಯುತ್ತಾರೆ.

63. ದಿನಾಂಕ 31.10.2015 ರಂದು ಆಕಾಶ ಬವನ ಶರಣ ಮತ್ತು ಆತನ ಸಹಚರರು ಬೆಳಿಗ್ಗೆ 10.30 ಗಂಟೆಗೆ ಕೋರ್ಟಿಗೆ ಹೋಗಲು ಬಿಡಲಾಗಿದ್ದ ಸಮಯದಲ್ಲಿ ವಿಶೇಷ ಭದ್ರತಾ ವಿಭಾಗದ 1 ನೇ ಬ್ಯಾರಾಕಿನ ಬಳಿಗೆ ಹೋಗಿ 6 ನೇ ಬ್ಯಾರಾಕಿನಲ್ಲಿ ಹಿಂದಿನ ದಿನ ನಡೆದ ಗಲಾಟೆಯ ಬಗ್ಗೆ ವಿಚಾರಿಸಿ ಅವರುಗಳನ್ನು ಬೈದ ಬಗ್ಗೆ ನಾನು ಆ ವೇಳೆಗೆ ಕಾರಾಗೃಹದಲ್ಲಿದ್ದ ಕಾರಣ ತಕ್ಷಣವೇ ಗೊತ್ತಾಗಿದ್ದು, ಆ ಬಗ್ಗೆ ನಾನು ವರದಿಯನ್ನು ಅದೇ ದಿನ ಕಾರಾಗೃಹದ ಡಿ.ಜಿ.ಪಿ ರವರಿಗೆ ಸಲ್ಲಿಸಿಕೊಂಡಿರುತ್ತೇನೆ.

64. ಖೈದಿಗಳ ನಡುವೆ ಪರಸ್ಪರ ಗಲಾಟೆಯಾದ ಸಂದರ್ಬದಲ್ಲಿ ನೀವು ಗಲಾಟೆಯನ್ನು ನಿಯಂತ್ರಿಸಲು ಯಾವ ಕ್ರಮ ಕೈಗೊಳ್ಳುತ್ತೀರಿ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾವು ಅವರನ್ನು ಬೇರ್ಪಡಿಸಲು ಪ್ರಯತ್ನಿಸುತ್ತೇವೆ, ಗಾಯಗಳು ಆಗಿದ್ದಲ್ಲಿ ಪೊಲೀಸರಿಗೆ ದೂರು ನೀಡುತ್ತೇವೆ ಎಂದು ನುಡಿಯುತ್ತಾರೆ. ದಿನಾಂಕ 31.10.2015 ರ ಘಟನೆಯ ಬಗ್ಗೆ ನನ್ನ ಬಳಿ ಯಾವುದೇ ಖೈದಿಗಳು ಲಿಖಿತ ದೂರನ್ನು ನೀಡಿಲ್ಲ. ದಿನಾಂಕ 31.10.2015 ರಂದು ಆಕಾಶ ಭವನ ಶರಣ

ಮತ್ತು ಆತನ ಸಹಚರರು 1 ನೇ ಬ್ಯಾರಾಕಿಗೆ ಹೋಗಿ ಗಲಾಟೆ ಮಾಡಿದ ವಿಚಾರವಾಗಿ, 1 ನೇ ಬ್ಯಾರಾಕಿನಲ್ಲಿದ್ದವರು ಊಟ ಮಾಡದೇ ಆಕಾಶ ಭವನ ಶರಣ ಮತ್ತು ಅವನ ಸಹಚರರನ್ನು ಜೈಲಿನಿಂದ ವರ್ಗಾವಣೆ ಮಾಡುವಂತೆ ದೊಂಬಿ ಮಾಡಿದ್ದ ಬಗ್ಗೆ ಅವರುಗಳ ವಿರುದ್ದ ಪ್ರಕರಣ ದಾಖಲಿಸಿದ್ದಿರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಅವರುಗಳು ಜೋರಾಗಿ ಬಾಯಿ ಮಾಡಿರುತ್ತಾರೆ ಆದರಿಂದ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದು ನುಡಿಯುತ್ತಾರೆ.

65. ನಾನು ದೊಂಬಿ ವಿಷಯವಾಗಿ ದೂರವಾಣಿಯಲ್ಲಿ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ ಆದರೆ ಲಿಖಿತವಾಗಿ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ದೂರವಾಣಿ ಮೂಲಕವೇ ಮೇಲಾಧಿಕಾರಿಗಳು ಆಕಾಶಭವನ ಶರಣನನ್ನು ಬೇರೆ ಕಾರಾಗೃಹಕ್ಕೆ ವರ್ಗಾವಣೆ ಮಾಡಲು ಆದೇಶಿಸಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 31.10.2015 ರಂದು ಆಕಾಶಭವನ ಮತ್ತು ಆತನ ಸಹಚರರು 1 ನೇ ಬ್ಯಾರಾಕಿನ ಬಳಿ ಹೋಗಿಲ್ಲ, 1 ನೇ ಬ್ಯಾರಾಕಿನವರ ಬಳಿ ಗಲಾಟೆ ಮಾಡಿಲ್ಲ ಮತ್ತು 1 ನೇ ಬ್ಯಾರಾಕಿನವರು ಆಕಾಶಬವನ ಶರಣ ಮತ್ತು ಆತನ ಸಹಚರರನ್ನು ಜೈಲಿನಿಂದ ವರ್ಗಾವಣೆ ಮಾಡುವಂತೆ ಯಾವುದೇ ದೊಂಬಿ ಮಾಡಿಲ್ಲ ಎಂದರೆ ಸರಿಯಲ್ಲ.

66. ಕಾರಾಗೃಹದ ನಿಯಮಾವಳಿಗಳಂತೆ ಕಾರಾಗೃಹದ ಎಲ್ಲ ಬ್ಯಾರಾಕು ಮತ್ತು ಸೆಲ್ ಗಳನ್ನು ಒಳಗೆ ಹೋಗಿ ಪರಿಶೀಲಿಸಿ ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಕ್ಕಲ್ಲಿ ಅವುಗಳ ಬಗ್ಗೆ ಜರ್ನಲ್‌ನಲ್ಲಿ ನಮೂದಿಸಬೇಕಾಗುತ್ತದೆ. ಸಾಕ್ಷಿಗೆ ನೀವು ಮುಖ್ಯವಿಚಾರಣೆಯಲ್ಲಿ ಹೇಳುವ ಘಟನೆಯ ಪೂರ್ವದಲ್ಲಿ ಯಾವ ದಿನ ನಿಯಮಾವಳಿ 43.3 ರಂತೆ ಬ್ಯಾರಾಕು ಮತ್ತು ಸೆಲ್ ಗಳನ್ನು

ಪರಿಶೀಲನೆ ಮಾಡಿ ಅನುಮಾನಾಸ್ಪದ ವಸ್ತುಗಳು ಇದೆಯೋ ಇಲ್ಲವೋ ಎಂದು ಪರಿಶೀಲಿಸಿದ್ದೀರಿ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾನು ನಮ್ಮ ಕಾರಾಗೃಹದ ವಾರ್ಡರ್ ಗಳ ಮೂಲಕ ಪ್ರತೀದಿನ ಸಂಜೆ ಬ್ಯಾರಾಕು ಮತ್ತು ಸೆಲ್ ಗಳನ್ನು ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ.

67. ನಾನು ದಿನಾಂಕ 01.11.2015 ರಂದು ನಮ್ಮ ಕಾರಾಗೃಹದ ವಾರ್ಡರ್ ಗಳ ಮೂಲಕ ಎಲ್ಲ ಬ್ಯಾರಾಕ್ ಮತ್ತು ಸೆಲ್‌ಗಳನ್ನು ಪರಿಶೀಲನೆ ಮಾಡಿಸಿದ್ದು, ಯಾವುದೇ ಅನುಮಾನಾಸ್ಪದ ವಸ್ತುಗಳು ಪರಿಶೀಲನೆಯ ವೇಳೆಗೆ ಲಭ್ಯವಾಗಿರುವುದಿಲ್ಲ. ಮೇಲಾಧಿಕಾರಿಗಳಿಗೆ Weekly Lockup ವರದಿಯನ್ನು ಕಳುಹಿಸಿಕೊಡುವ ಕ್ರಮವಿರುತ್ತದೆ, ಸದರಿ ವರದಿಯಲ್ಲಿ ಕಾರಾಗೃಹದಲ್ಲಿರುವ ಒಟ್ಟು ಖೈದಿಗಳ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ ಆದರೆ ಯಾವ ಖೈದಿಗಳನ್ನು ಎಲ್ಲಿ ಇಡಲಾಗಿರುತ್ತದೆ ಎಂಬ ಮಾಹಿತಿಯನ್ನು ನೀಡುವ ಕ್ರಮ ಇರುವುದಿಲ್ಲ ಎಂದು ನುಡಿಯುತ್ತಾರೆ.

68. ಘಟನೆಯ ಪೂರ್ವದಲ್ಲಿ ಅಂದರೆ ದಿನಾಂಕ 31.10.2015 ರಂದು ನಾನು ಮೇಲಾಧಿಕಾರಿಗಳಿಗೆ Lockup ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ. ನಾನು ಸದರಿ Lockup ವರದಿಯಲ್ಲಿ ಕಾರಾಗೃಹದಲ್ಲಿ ನಿಗದಿಯಂತೆ 210 ಖೈದಿಗಳನ್ನು ಇರಿಸಬಹುದಾಗಿದ್ದು, ಆ ವೇಳೆಗೆ 435 ಖೈದಿಗಳು ಇದ್ದ ಬಗ್ಗೆಯೂ ಸಹ ನಮೂದಿಸಿರುತ್ತೇನೆ. ಸಾಕ್ಷಿ ಆ ಬಗ್ಗೆ ಮೇಲಾಧಿಕಾರಿಗಳ ಸೂಚನೆಯಂತೆ ಯಾವುದಾದರೂ ಕ್ರಮವನ್ನು ಕೈಗೊಂಡಿದ್ದಿರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ನಿಗದಿಗಿಂತ ಹೆಚ್ಚು ಖೈದಿಗಳು ಇದ್ದ

ಕಾರಣ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

69. ನಾನು ಕಾರಾಗೃಹದಲ್ಲಿ ನಿಗದಿಗಿಂತ ಹೆಚ್ಚು ಖೈದಿಗಳು ಘಟನೆಯ ವೇಳೆಗೆ ಇದ್ದರು ಎನ್ನುವ ಬಗ್ಗೆ ಮಾನ್ಯ ನ್ಯಾಯಾಲಯವನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಹೇಳಿಲ್ಲ. ಮಂಗಳೂರು ಜಿಲ್ಲಾ ಕಾರಾಗೃಹದ ಎಲ್ಲ ಕಾರಾಗೃಹದ ಸಿಬ್ಬಂದಿಗಳಿಗೆ ಕರ್ತವ್ಯ ನಿಯೋಜನೆಯನ್ನು ನಾನು ಮಾಡುತ್ತೇನೆ. ನಾನು ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಣೆಯ ಬಗ್ಗೆ ಹಂಚಿಕೆ ಮಾಡಿದ್ದನ್ನು ಕರ್ತವ್ಯ ನಿರ್ವಹಣೆ ಹಂಚಿಕೆ ಪುಸ್ತಕದಲ್ಲಿ ನಮೂದಿಸಬೇಕಾಗುತ್ತದೆ. ಕಾರಾಗೃಹದಲ್ಲಿ ಗೇಟ್ ಕೀಪರ್ ನ್ನು ನಾನು ನೇಮಿಸಿರುತ್ತೇನೆ. ಪ್ರತೀ ವಾರ ಗೇಟ್ ಕೀಪರ್ ನ್ನು ಬದಲಾಯಿಸಲಾಗುತ್ತದೆ. ದಿನಾಂಕ 02.11.2015 ರಂದು ಕಾರಾಗೃಹದ ಯಾವ ಸಿಬ್ಬಂದಿಯನ್ನು ಗೇಟ್ ಕೀಪರ್ ಆಗಿ ನಾನು ನಿಯೋಜಿಸಿದ್ದೆ ಎಂದು ಈಗ ಹೇಳಲು ನೆನಪಿಲ್ಲ.

70. ಕಾರಾಗೃಹದ ಗೇಟ್ ಕೀಪರ ರವರು ಖೈದಿಗಳನ್ನು ಹೊರತುಪಡಿಸಿ ಕಾರಾಗೃಹದ ಒಳಗೆ ಬರುವ ಮತ್ತು ಕಾರಾಗೃಹದ ಹೊರಗೆ ಹೋಗುವ ಎಲ್ಲ ಸಿಬ್ಬಂದಿಗಳು ಮತ್ತು ಇತರರ ಹೆಸರು, ಕಾರಾಗೃಹದ ಆಗಮಿಸಿದ ಮತ್ತು ನಿರ್ಗಮಿಸಿದ ವೇಳೆ ಮತ್ತು ಸದರಿ ವ್ಯಕ್ತಿಗಳ ಸಹಿಗಳನ್ನು ಪಡೆಯುತ್ತಾರೆ. ತನಿಖಾಧಿಕಾರಿಗಳು ನನ್ನಿಂದ ಗೇಟ್ ಕೀಪರ್ ರಿಜಿಸ್ಟರನ್ನು ಅಥವಾ ರಿಜಿಸ್ಟರಿನ ಪ್ರತಿಯನ್ನು ಪಡೆದುಕೊಂಡಿಲ್ಲ.

71. ಕಾರಾಗೃಹದ ಬ್ಯಾರಾಕ್ ಮತ್ತು ಸೆಲ್‌ಗಳ ಬಾಗಿಲುಗಳನ್ನು ತೆಗೆಯುವ ಮತ್ತು

ಮುಚ್ಚುವ ಬಗ್ಗೆ ಕೀ ರಿಜಿಸ್ಟರಿನಲ್ಲಿ ನಮೂದಿಸಬೇಕಾಗುತ್ತದೆ. ಸದರಿ ರಿಜಿಸ್ಟರಿನಲ್ಲಿ ಯಾವ ಸಿಬ್ಬಂದಿ ಬ್ಯಾರಾಕ್ ಅಥವಾ ಸೆಲ್‌ಗಳ ಬಾಗಿಲನ್ನು ತೆಗೆದಿರುತ್ತಾರೆ ಮತ್ತು ಮುಚ್ಚಿರುತ್ತಾರೆ ಎನ್ನುವ ಬಗ್ಗೆ ನಮೂದು ಇರುತ್ತದೆ. ವಿಚಾರಣಾದಿನ ಖೈದಿ ಕಾರಾಗೃಹಕ್ಕೆ ಬಂದಾಗ ಆತನಿಗೆ ವಿಚಾರಣಾ ದಿನ ಖೈದಿ ಸಂಖ್ಯೆ (UTP) ಮತ್ತು ಆತನ ಹೆಸರು ಮತ್ತು ವಿಳಾಸ ಹಾಗೂ ಆತನ ವಿರುದ್ಧ ದಾಖಲಾದ ಪ್ರಕರಣಗಳ ವಿವರಗಳನ್ನು UTP ರಿಜಿಸ್ಟರನಲ್ಲಿ ನಮೂದಿಸುತ್ತೇವೆ. ಆದರೆ UTP ರಿಜಿಸ್ಟರಿನಲ್ಲಿ ಸದರಿ ವಿಚಾರಣಾದಿನ ಖೈದಿಯನ್ನು ಯಾವ ಬ್ಯಾರಾಕ್ ಅಥವಾ ಸೆಲ್‌ನಲ್ಲಿ ಇಡಲಾಗಿದೇ ಎಂದು ನಮೂದಿಸುವುದಿಲ್ಲ.

72. ಪ್ರತೀ ವಿಚಾರಣಾದಿನ ಖೈದಿಗೆ ಅವನ ಹೆಸರು, ತಂದೆಯ ಹೆಸರು, UTP ಸಂಖ್ಯೆ ಮತ್ತು ಅವನ ವಿರುದ್ಧ ದಾಖಲಾದ ಪ್ರಕರಣದ ವಿವರವನ್ನು ನಮೂದಿಸಿ ಚೀಟಿಯನ್ನು ನೀಡುತ್ತೇವೆ. ಈ ಪ್ರಕರಣದ ಎಲ್ಲ ಆರೋಪಿಗಳಿಗೆ ನಮ್ಮ ಕಾರಾಗೃಹಕ್ಕೆ ದಾಖಲಾದ ವೇಳೆಗೆ ಅವರ ಹೆಸರು, ವಿಳಾಸ, ದಾಖಲಾದ ಪ್ರಕರಣದ ವಿವರಗಳನ್ನು UTP ರಿಜಿಸ್ಟರಿನಲ್ಲಿ ನಮೂದಿಸಿರುತ್ತೇವೆ ಮತ್ತು ಆ ಬಗ್ಗೆ ಅವರಿಗೆ ಚೀಟಿಯನ್ನು ಸಹ ನೀಡಿರುತ್ತೇವೆ. ಪ್ರತೀ ಬ್ಯಾರಾಕ್ ಮತ್ತು ಸೆಲ್ ಗಳಲ್ಲಿ ಇಡಲಾಗುವ ಹಾಜರಾತಿ ವಹಿಯನ್ನು ಸದರಿ ಬ್ಯಾರಾಕ್ ಮತ್ತು ಸೆಲ್‌ಗಳ ಬಾಗಿಲನ್ನು ಆ ದಿನ ತೆಗೆಯುವ ಸಿಬ್ಬಂದಿ ನಿರ್ವಹಣೆ ಮಾಡುತ್ತಾರೆ. ಈ ಪ್ರಕರಣದ ತನಿಖಾಧಿಕಾರಿಗಳು ನನ್ನಿಂದ UTP ರಿಜಿಸ್ಟರ್, UTP ರಿಜಿಸ್ಟರಿನ ಪ್ರತಿ, ಬ್ಯಾರಾಕ್ ಮತ್ತು ಸೆಲ್‌ಗಳ ಹಾಜರಾತಿ ವಹಿ ಅಥವಾ ಬ್ಯಾರಾಕ್ ಮತ್ತು ಸೆಲ್‌ಗಳ ಹಾಜರಾತಿ ವಹಿಯ ಪ್ರತಿಗಳನ್ನು ನನ್ನಿಂದ ಪಡೆದುಕೊಂಡಿಲ್ಲ.

73. ನಾನು ದಿನಾಂಕ 02.11.2015 ರಂದು ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಕರ್ತವ್ಯಕ್ಕಾಗಿ ಬೆಳಿಗ್ಗೆ 06.00 ಗಂಟೆಗೆ ಬಂದ ಬಗ್ಗೆ ದಾಖಲೆ ಇರುತ್ತದೆ. 2015 ರಲ್ಲಿ ನನ್ನ ಕಚೇರಿಯಿಂದ ಘಟನೆ ನಡೆಯಲಾಯಿತು ಎನ್ನುವ ಸ್ಥಳಕ್ಕೆ ಸುಮಾರು 120 ಮೀಟರ್ ದೂರವಾಗುತ್ತಿತ್ತು. ನಾವು ನ್ಯಾಯಾಲಯದಲ್ಲಿ ಪ್ರಕರಣವಿದ್ದ ಹಿಂದಿನ ದಿನವೇ ಯಾವೆಲ್ಲ ಖೈದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂಬ ಬಗ್ಗೆ ಪಟ್ಟಿಯನ್ನು ತಯಾರಿಸುತ್ತೇವೆ.

74. ದಿನಾಂಕ 02.11.2015 ರಂದು ಮಾಡೂರು ಯುಸೂಫನನ್ನು ಹೊರತುಪಡಿಸಿ ಸೆಲ್ ನಂಬರ್ 3, 4 ಮತ್ತು 5 ರಲ್ಲಿ ಇರಿಸಲಾಗಿದ್ದ ಇತರೆ ಖೈದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿತ್ತಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 02.11.2015 ರಂದು 4 ನೇ ಸೆಲ್ ನ್ನು ಅನ್ ಲಾಕ್ ಮಾಡಲು ಯಾವುದಾದರೂ ವಿಶೇಷ ಕಾರಣವಿತ್ತೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಪ್ರತೀ ದಿನ 5 ನೇ ಸೆಲ್ ಅನಲಾಕ್ ಮಾಡಿದಾಗ 4 ನೇ ಸೆಲ್ ನ್ನು ಸಹ ಅನಲಾಕ್ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. 4 ಮತ್ತು 5 ನೇ ಸೆಲ್ ನಲ್ಲಿದ್ದ ಖೈದಿಗಳು ಬೇರೆ ಬೇರೆ ಪ್ರಕರಣಗಳ ಖೈದಿಗಳಾಗಿದ್ದರು.

75. ಮಾಡೂರು ಯುಸೂಫನ ಹಲ್ಲೆಯ ಬಗ್ಗೆ ಪೊಲೀಸರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾನು ಘಟನೆ ನೋಡಿ ಪೊಲೀಸರಿಗೆ ಫೋನ್ ಮಾಡಿ

ಎಂದು ಕೂಗಿಕೊಂಡ ಕಾರಣ ಆ ದಿನ ಗೇಟ್‌ಕೀಪರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಪೊಲೀಸರಿಗೆ ಫೋನ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 02.11.2015 ರಂದು 4 ನೇ ನಂಬರಿನ ಸೆಲ್‌ನಲ್ಲಿ ಗಣೇಶ ಮತ್ತು ಮಹೇಶ ಎಂಬ ಖೈದಿಗಳು ಇದ್ದರು. ಮುಖ್ಯವಿಚಾರಣೆಯ ಕಂಡಿಕೆ 11 ರಲ್ಲಿ ನಾನು ನಮೂದಿಸಿರುವ ಟವರ್ ನಿಂದ ಸೆಲ್ ನಂಬರ್ 4 ಮತ್ತು 5 ಕ್ಕೆ ಸುಮಾರು 60 ರಿಂದ 70 ಅಡಿ ದೂರವಾಗುತ್ತದೆ.

76. ನಾನು ದಿನಾಂಕ 02.11.2015 ರಂದು ಬೆಳಿಗ್ಗೆ ಕಾರಾಗೃಹದ ಟವರ್ ಬಳಿಯಿದ್ದ ವೇಳೆಗೆ 4 ನೇ ಸೆಲ್‌ನಲ್ಲಿದ್ದ ಖೈದಿಗಳು ಸೆಲ್‌ನ ಹೊರಗೆ ಕಾಣಿಸಿರುವುದಿಲ್ಲ. ನಾನು ದಿನಾಂಕ 02.11.2015 ರಂದು ಕಾರಾಗೃಹಕ್ಕೆ ಕರ್ತವ್ಯಕ್ಕೆ ಹಾಜರಾಗಿ ಟವರ್ ನ ಬಳಿಯಿದ್ದ ವೇಳೆಗೆ ವಿಶೇಷಬದ್ರುತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಸಾ-1/ವಿ.ಪಿ. ಹಿಂದಿನಮನಿ ಸದರಿ ವಿಭಾಗದ ಬ್ಯಾರಾಕ್ ಮತ್ತು ಸೆಲ್‌ಗಳಲ್ಲಿದ್ದ ಖೈದಿಗಳ ಹಾಜರಾತಿ ದಾಖಲಾತಿಯನ್ನು ನನಗೆ ನೀಡಿಲ್ಲ.

77. ಬರ್ಕೆ ಪೊಲೀಸರು ಕಾರಾಗೃಹದ ಗೇಟಿನ ಬಳಿ ಬೆಳಿಗ್ಗೆ 07.50 ರಿಂದ 07.55 ರ ವೇಳೆಗೆ ಬಂದಿರುತ್ತಾರೆ. ಅಪರಾಧ ಸಂಖ್ಯೆ 92/2015 ರಲ್ಲಿ ದೂರು ನೀಡುವ ಪೂರ್ವದಲ್ಲಿಯೇ ಮಂಗಳೂರು ನಗರದ ಎಲ್ಲ ಪೊಲೀಸ್ ಮೇಲಾಧಿಕಾರಿಗಳು ಕಾರಾಗೃಹಕ್ಕೆ ಆ ದಿನ ಬೇಟಿ ನೀಡಿದ್ದರು. ದಿನಾಂಕ 02.11.2015 ರಂದು ಚಕ್ರೇಶ ಎಂಬ ನಮ್ಮ ಕಾರಾಗೃಹದ ಸಿಬ್ಬಂದಿ ಕರ್ತವ್ಯದಲ್ಲಿ ಇದ್ದರು. ಮೇಲಾಧಿಕಾರಿಗಳು ಆ ದಿನ ಜಿಲ್ಲಾ ಕಾರಾಗೃಹಕ್ಕೆ ಬಂದ ವೇಳೆಗೆ ನಾನು

ಘಟನೆಯ ಬಗ್ಗೆ ಅವರ ಬಳಿ ಮಾತನಾಡಿರುತ್ತೇನೆ. ಮೇಲಾಧಿಕಾರಿಗಳು ಘಟನಾ ಸ್ಥಳವನ್ನು ಜಿಲ್ಲಾ ಕಾರಾಗೃಹದಲ್ಲಿ ಆ ದಿನ ಪರಿಶೀಲನೆ ಮಾಡಿರುವುದಿಲ್ಲ ಆದರೆ ಸಂಬಂದಪಟ್ಟ ಅಧಿಕಾರಿಗಳಿಗೆ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

78. ನಾನು ಅಪರಾಧ ಸಂಖ್ಯೆ 92/2015 ರಲ್ಲಿ ನೀಡಿರುವ ದೂರನ್ನು ಆ ದಿನ ನನ್ನ ಕಚೇರಿಯಲ್ಲಿಯೇ ಟೈಪ್ ಮಾಡಿಸಿ ಅಲ್ಲಿಯೇ ಪೊಲೀಸರಿಗೆ ನೀಡಿರುತ್ತೇನೆ. ಸದರಿ ದೂರನ್ನು ನನ್ನ ಉಕ್ತಲೇಖನದಂತೆ ತಯಾರಿಸಲಾಗಿರುತ್ತದೆ. ನಿಪಿ-6 ರಲ್ಲಿ "ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡಿದ ಗುಂಪು ಅಲ್ಲಿಯೇ ಇದ್ದ ಗಣೇಶ ಶೆಟ್ಟಿಯ ಮೇಲೆ ಹಲ್ಲೆ ಮಾಡಲು ಶುರು ಮಾಡಿದಾಗ" ಎಂದು ನಮೂದು ಆಗಿರುತ್ತದೆ. ಸದರಿ ಭಾಗವನ್ನು **ನಿಡಿ-1** ಎಂದು ಗುರುತಿಸಲಾಯಿತು. ಸಾಕ್ಷಿ ಆ ವೇಳೆಗೆ ಒತ್ತಡದಲ್ಲಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ದಿನಾಂಕ 02.11.2015 ರಂದು ಬೆಳಗಿನಿಂದ ರಾತ್ರಿ 08.30 ರವರೆಗೆ ಕಾರಾಗೃಹದಲ್ಲಿ ಇದ್ದೆ.

79. ಮೃತ ಮಾಡೂರು ಯುಸೂಫ ಮತ್ತು ಮೃತ ಗಣೇಶ ಶೆಟ್ಟಿ ಎರಡು ಪ್ರತ್ಯೇಕ ಗ್ಯಾಂಗ್ ಗಳಿಗೆ ಸೇರಿದ ವ್ಯಕ್ತಿಗಳು ಎಂದು ಪ್ರಶ್ನಿಸಲಾಗಿ, ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಘಟನೆಯ ವೇಳೆಗೆ ಮಂಗಳೂರು ನಗರದ ಆರಕ್ಷಕ ಆಯುಕ್ತರಾಗಿ ಮುರುಗನ್ ರವರು ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ 02.11.2015 ರಂದು ಆಯುಕ್ತರಾದ ಮುರುಗನ್ ರವರು ಎರಡು ಗ್ಯಾಂಗ್‌ಗಳ ನಡುವೆ ಜಿಲ್ಲಾ ಕಾರಾಗೃಹದಲ್ಲಿ ಆದ ಘರ್ಷಣೆ ಎಂದು ಪತ್ರಿಕಾ ಮತ್ತು ದೃಶ್ಯ ಮಾದ್ಯಮಗಳಿಗೆ ಹೇಳಿಕೆ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ.

80. ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಆ ವೇಳೆಗೆ ಇದ್ದ ವಿಚಾರಣಾ ದಿನ ಖೈದಿ ಫೈಜಲ್ ಎನ್ನುವವರು ಕಾರಾಗೃಹದ ಸಿಬ್ಬಂದಿ ಚಕ್ರೇಶರವರ ಚಿತಾವಣೆ ಮೇರೆಗೆ ಘಟನೆ ಆಗಿದೆ ಎಂದು ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾರಾಗೃಹದಲ್ಲಿ ಆದ ಘಟನೆಯ ಬಗ್ಗೆ ಪೊಲೀಸ್ ತನಿಖೆಯನ್ನು ಹೊರತುಪಡಿಸಿ ನಮ್ಮ ಇಲಾಖೆಯಲ್ಲಿಯೂ ಸಹ ಆಂತರಿಕ ತನಿಖೆ ನಡೆದಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ಘಟನೆಯ ದಿನ ಮತ್ತು ನಂತರದ ದಿನಗಳಲ್ಲಿಯೂ ಸಹ ವಿಚಾರಿಸಿರುತ್ತಾರೆ.

81. ದಿನಾಂಕ 02.11.2015 ರಂದು ಮಂಗಳೂರಿನ 3 ನೇ JMFC ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಕಾರಾಗೃಹಕ್ಕೆ ಬಂದು ನನ್ನನ್ನು ಘಟನೆಯ ಬಗ್ಗೆ ವಿಚಾರಿಸಿರುತ್ತಾರೆ. ನಾನು ಅದೇ ದಿನ ಮಂಗಳೂರು ನಗರದ ಜಿಲ್ಲಾ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 174 ರಡಿಯಲ್ಲಿ ಶವತನಿಖಾ ಕಾಲದಲ್ಲಿ ಮಾನ್ಯ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಅಪರಾಧ ಸಂಖ್ಯೆ 92/2015 ರಲ್ಲಿ ದೂರು ದಾಖಲಿಸಿದಾಗ ಸದರಿ ದೂರಿನಲ್ಲಿ ಅಥವಾ ಮಾಡೂರು ಯುಸೂಫನ ಶವತನಿಖಾ ಕಾಲದ ಹೇಳಿಕೆಯಲ್ಲಿ ಮುಖ್ಯವಿಚಾರಣೆಯ ಕಂಡಿಕೆ 17, 18 ಮತ್ತು 19 ರಲ್ಲಿ ನಮೂದಿಸಿದಂತೆ ಈ ಪ್ರಕರಣದ ಆರೋಪಿಗಳು ಯಾವೆಲ್ಲ ಆಯುಧಗಳನ್ನು ಹಿಡಿದುಕೊಂಡಿದ್ದರು ಎಂಬ ಬಗ್ಗೆ ಹೇಳಿಕೆ ನೀಡಿಲ್ಲ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಆಗ ಸಂದರ್ಭ ಬಂದಿರಲಿಲ್ಲ ಹಾಗಾಗಿ ಹೇಳಿಲ್ಲ ಎಂದು ನುಡಿಯುತ್ತಾರೆ.

82. ಆರೋಪಿಗಳು ಆ ದಿನ ಯಾವುದೇ ಕೃತ್ಯದಲ್ಲಿ ಬಾಗಿಯಾಗದ ಕಾರಣ ನಾನು ಅಪರಾಧ ಸಂಖ್ಯೆ 92/2015 ರ ದೂರಿನಲ್ಲಿ ಮತ್ತು ಮಾಡೂರು ಯುಸೂಫನ ಶವತನಿಖೆ ಕಾಲದಲ್ಲಿ ಹೇಳಿಕೆ ನೀಡದೇ ಇದ್ದು, ನಮ್ಮ ಇಲಾಖೆಯ ಮೇಲಾಧಿಕಾರಿಗಳು ಮತ್ತು ಪೊಲೀಸರ ಒತ್ತಡದಿಂದ ಆರೋಪಿಗಳ ವಿರುದ್ದ ನಂತರ ಸುಳ್ಳು ಹೇಳಿಕೆಯನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 02.11.2015 ರಂದು 1 ನೇ ಬ್ಯಾರಾಕಿನ ಬೀಗವನ್ನು ಒಡೆದಿಲ್ಲ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಗಳು 1 ನೇ ಬ್ಯಾರಾಕಿನಿಂದ ಹೊರಬಂದು ಯಾವುದೇ ಘಟನೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ.

83. ಪೊಲೀಸರು ದಿನಾಂಕ 02.11.2015 ರಂದು ಮದ್ಯಾಹ್ನ 01.00 ರಿಂದ 01.30 ಗಂಟೆಗೆ ಕಾರಾಗೃಹಕ್ಕೆ ಬಂದಿದ್ದು, ಮದ್ಯಾಹ್ನ 02.00 ಗಂಟೆಗೆ ಪಂಚನಾಮೆಯನ್ನು ಪ್ರಾರಂಬಿಸಿರುತ್ತಾರೆ. ಸಾಕ್ಷಿಗೆ ಸ್ಥಳದಲ್ಲಿದ್ದ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಪ್ರತ್ಯೇಕವಾಗಿ ನಿಮ್ಮ ಸಮಕ್ಷಮ ಯಾವುದಾದರೂ ದಾಖಲೆಯನ್ನು ತಯಾರಿಸಿರುತ್ತಾರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಪೊಲೀಸರು ಮತ್ತು ತಜ್ಞರು ಒಟ್ಟಾಗಿ ವಸ್ತುಗಳನ್ನು ಅಮಾನತುಪಡಿಸಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸಹಿ ಮಾಡಿದ ಆ ದಿನದ ಪಂಚನಾಮೆಯಲ್ಲಿ FSL ತಜ್ಞರು ಬಂದಿದ್ದ ಕಾರಣ ಅವರ ಸಹಿಯೂ ಸಹ ಪಂಚನಾಮೆಯಲ್ಲಿ ಇರುತ್ತದೆ. ಆ ದಿನದ ಪಂಚನಾಮೆಯ ಕಾಲದಲ್ಲಿ ಬ್ಯಾರಾಕ್ ನಂಬರ್ 1, 2 ಮತ್ತು 6 ಹಾಗೂ ಸೆಲ್ ನಂಬರ್ 3 ರಲ್ಲಿ ಖೈದಿಗಳು ಇದ್ದರು.

84. ಪಂಚನಾಮೆಗೆ ಬಂದಿದ್ದ ಪೊಲೀಸರು ಎಲ್ಲ ಬ್ಯಾರಾಕುಗಳನ್ನು ಪರಿಶೀಲನೆ ಮಾಡಿ ಘಟನೆಗೆ ಅವಶ್ಯಕತೆ ಇದ್ದ ಎಲ್ಲ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ದಿನಾಂಕ 02.11.2015 ರ ಪಂಚನಾಮೆಯ ಅಡಿಯಲ್ಲಿ ಮುರಿದ ಬೀಗದ ಕೊಂಡಿಯನ್ನು ಪೊಲೀಸರು ಅಮಾನತುಪಡಿಸಿಕೊಂಡ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರು ಆ ದಿನ ಮುರಿದ ರೀಪಿನ ತುಂಡುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಆದರೆ ಪಕಾಸಿನ ತುಂಡುಗಳನ್ನು ಅಮಾನತುಪಡಿಸಿಕೊಂಡ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರು 3 ಹಂಚಿನ ತುಂಡುಗಳನ್ನು ಸಹ ಸ್ವಾದೀನಪಡಿಸಿಕೊಂಡಿರುತ್ತಾರೆ.

85. 4 ಅಡಿ ಉದ್ದದ ಟ್ಯೂಬ್ ಲೈಟಿನ ಫ್ರೆಮ್ ನ್ನು ಪೊಲೀಸರು ಆ ದಿನ ಪಂಚನಾಮೆಯ ಮೂಲಕ ಸ್ವಾದೀನಪಡಿಸಿಕೊಂಡ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರು ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತಾರೆ ಆದರೆ ವಿಡಿಯೋ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರು ಸ್ಥಳದಲ್ಲಿದ್ದ ವಿಚಾರಣಾದಿನ ಖೈದಿಗಳ ಸಹಿಯನ್ನು ಪಡೆದ ಬಗ್ಗೆ ನನಗೆ ನೆನಪಿಲ್ಲ. ದಿನಾಂಕ 02.11.2015 ರಂದು ಮದ್ಯಾಹ್ನ 02.00 ಗಂಟೆಗೆ ಪೊಲೀಸರು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

86. ನಮ್ಮ ಸಿಬ್ಬಂದಿಗಳ ನಿರ್ಲಕ್ಷದಿಂದ ಆದ ಘಟನೆಯನ್ನು ಮರೆಮಾಚಿ ನೈಜ ಘಟನೆಗೆ

ವ್ಯತಿರಿಕ್ತವಾಗಿ ಆರೋಪಿಗಳ ವಿರುದ್ಧ ಸುಳ್ಳು ಕೊಲೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಗಣೇಶ ಶೆಟ್ಟಿಯ ಕೊಲೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರು ಮತ್ತು ಪೊಲೀಸರು ಸಮಾಲೋಚನೆ ಮಾಡಿ, ಕಾರಾಗೃಹದ ಅವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದವರ ಮೇಲೆ ನಮ್ಮ ಸಿಬ್ಬಂದಿಯ ಮೂಲಕ ತಡವಾಗಿ ದೂರು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನೀಡಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಪ್ರಕರಣದಲ್ಲಿ ಗುರುತಿಸಲಾದ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ **5** ನೇ ಆರೋಪಿತನ ಪರ ಶ್ರೀ ಐ.ಬಿ., ವಕೀಲರಿಂದ.</u>

87. ನೀವು ಮುಖ್ಯವಿಚಾರಣೆಯ 15 ನೇ ಕಂಡಿಕೆಯಲ್ಲಿ ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡಿದವರು ಜಗದೀಶ ಬೆಕ್ಕಿನಾಳ ರವರ ಮೇಲೆಯೂ ಸಹ ಹಲ್ಲೆ ಮಾಡಿದ್ದ ಕಾರಣದಿಂದ ಅವರಿಗೆ ಜಾಸ್ತಿ ನೋವಾಗಿದ್ದ ಕಾರಣದಿಂದ ನಾನು ಮತ್ತು ಹಿಂದಿನಮನಿಯವರು ಮಾಡೂರು ಯುಸೂಫನನ್ನು 5 ನೇ ನಂಬರ್ ಸೆಲ್‌ನಿಂದ ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಿದ್ದೆವು. ಮಾಡೂರು ಯುಸೂಫನನ್ನು ನಾವಿಬ್ಬರು ಅಲ್ಲಿಂದ ಸಾಗಿಸಲು ಸಾದ್ಯವಾಗದ ಕಾರಣ ಹಿಂದಿನಮನಿಯವರಿಗೆ 3 ನೇ ಸೆಲ್ ನ ಬಾಗಿಲು ತೆಗೆದು ಸದರಿ ಸೆಲ್ ನಲ್ಲಿದ್ದ ಬಂದಿಗಳನ್ನು ಮಾಡೂರು ಯುಸೂಫನನ್ನು ಆಸ್ಪತ್ರೆಗೆ ಸಾಗಿಸಲು ಕರೆಯುವಂತೆ ಸೂಚಿಸಿದ್ದೆ ಎಂದು ಸಾಕ್ಷ್ಯ ನೀಡಿದ್ದು 5 ನೇ ಸೆಲ್‌ನಲ್ಲಿದ್ದ 1 ಮತ್ತು 5 ನೇ ಆರೋಪಿಗಳನ್ನು ಮಾಡೂರು ಯುಸೂಫನನ್ನು ಆಸ್ಪತ್ರೆಗೆ ಸಾಗಿಸಲು ಏಕೆ ಕರೆಯಲಿಲ್ಲ ಎಂದು ಪ್ರಶ್ನಿಸಲಾಗಿ, ಸಾಕ್ಷಿ 1 ಮತ್ತು 5 ನೇ

ಆರೋಪಿಗಳಿಗೂ ಪೆಟ್ಟಾಗಿದ್ದು, ಆ ಗಡಿಬಿಡಿಯಲ್ಲಿ ಅವರು 5 ನೇ ಸೆಲ್‌ನಿಂದ ಹೊರಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

88. 5 ನೇ ಆರೋಪಿಯ ಮೇಲೆ ಹಲ್ಲೆಯಾಗಿದ್ದ ಕಾರಣ, 5 ನೇ ಆರೋಪಿ ಸೆಲ್‌ನ ಒಳಗೆ ಕುಸಿದು ಬಿದ್ದಿದ್ದರಿಂದ ಮಾಡೂರು ಯುಸೂಫನನ್ನು ಹೊರಗೆ ಸಾಗಿಸಲು 5 ನೇ ಆರೋಪಿಯ ಸಹಾಯ ಕೇಳಲಿಲ್ಲ ಎಂದು ಪ್ರಶ್ನಿಸಲಾಗಿ, ಸಾಕ್ಷಿ 5 ನೇ ಆರೋಪಿ ಸೆಲ್‌ನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. 5 ನೇ ಆರೋಪಿ ಯಾವ ಸ್ಥಿತಿಯಲ್ಲಿದ್ದ ಎಂದು ನೀವು ನೋಡಿದ್ದೀರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಅವನಿಗೂ ಸಹ ಪೆಟ್ಟಾಗಿತ್ತು ಎಂದು ನುಡಿಯುತ್ತಾರೆ. 4 ಮತ್ತು 5 ನೇ ಸೆಲ್ ಗಳು ಒಂದೇ ವರೆಂಡಾಗೆ ಹೊಂದಿಕೊಂಡಂತೆ ಇರುತ್ತವೆ. 5 ನೇ ಸೆಲ್ ನ ಹೊರಗೆ ನಿಂತಾಗಲೂ ಸಹ 4 ನೇ ಸೆಲ್‌ನ ಹೊರಗೆ ನಿಂತುಕೊಂಡಂತೆ ಭಾಸವಾಗುತ್ತದೆ. 5 ನೇ ಆರೋಪಿಯ ಕೈಯಲ್ಲಿ ನಾನು ನೋಡುವ ವೇಳೆಗೆ ಆತನ ಕೈಯಲ್ಲಿ ರೀಪು ಇಲ್ಲದಿದ್ದರೂ ತನಿಖಾಧಿಕಾರಿಗಳ ಒತ್ತಾಸೆಯಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀ ಐ.ಬಿ ರವರು ಉಳಿದಂತೆ ಶ್ರೀ ಎನ್.ಎನ್.ಹೆಚ್ ಮತ್ತು ಶ್ರೀ ವಿ.ಕೆ ರವರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಪಾಟೀಸವಾಲುಃ 8 ಆರೋಪಿತನ ಪರ ಶ್ರೀ ಟಿ.ಆರ್.ಎಸ್, ವಕೀಲರಿಂದ.**

89. 1 ನೇ ಆರೋಪಿ ಇಕ್ಬಾಲ್, 8 ನೇ ಆರೋಪಿ ಹಬೀಬ್ ಮತ್ತು 4 ನೇ ಆರೋಪಿ ನಫಾಟೆ ರಫೀಕ್ ತಮ್ಮ ಕೈಗಳಲ್ಲಿದ್ದ ಆಯುಧಗಳನ್ನು 4 ನೇ ಸೆಲ್ ನ ಒಳಗೆ ಎಸೆದು ಓಡಿ ಹೋಗಿರುತ್ತಾರೆ

ಎಂದು ನೀವು ಮುಖ್ಯವಿಚಾರಣೆಯಲ್ಲಿ ಹೇಳಿದ್ದ, ಆ ಬಗ್ಗೆ ಪೊಲೀಸರು ಪಂಚನಾಮೆ ಮಾಡಿರುತ್ತಾರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಪೊಲೀಸರು ಪಂಚನಾಮೆಯ ವೇಳೆಗೆ ವಸ್ತುಗಳನ್ನು ಅವುಗಳು ಇದ್ದ ಸ್ಥಳಗಳಿಂದ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ನಾನು ಆ ಬಗ್ಗೆ ಸಹಿ ಮಾಡಿರುತ್ತೇನೆ. 8 ನೇ ಆರೋಪಿ ನನ್ನ ಸಮಕ್ಷಮ ಯಾವುದೇ ಆಯುಧವನ್ನು 4 ನೇ ಸೆಲ್ ನ ಒಳಗೆ ಎಸೆದಿಲ್ಲ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

7 ನೇ ಆರೋಪಿತನ ಪರ ಶ್ರೀ ಒ.ಎಫ್ ಮತ್ತು 10 ಮತ್ತು 11 ನೇ ಆರೋಪಿತರ ಪರ ಶ್ರೀ ವೈ.ವಿ.ಹೆಚ್ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.